ಇಲ್ಲ' ಎಂದು ಜನರ ಮೆಚ್ಚುಗೆ ಪಡೆಯುವ ಮನದಾಸೆ ಅವನದಾಗಿತ್ತು. ಆಸೆ ಈಡೇರಿಸಿಕೊಳ್ಳಲು ಮನೆಯಲ್ಲಿದ್ದ ಮೇಕೆ ಸಂತೆಗೊಯ್ದು ಮಾರಿದ್ದ. ಪೇಟೆಯಿಂದ ರಾಜಾರೋಷವಾಗಿ ಬಂದು ನಾಟಕದಲ್ಲಿ ಹೆಂಡತಿ ಪಾರ್ಟು ಮಾಡುವ ಹೆಣ್ಣು ಎಂತವಳಿರಬೇಕು? ಎಂಬ ಪ್ರಶ್ನೆ ರೊಡ್ಡಯ್ಯನ ಹೆಂಡತಿ ಪಿಳ್ಳಮ್ಮನ ಕಾಡಿತು. ತೌರಿಂದ ಬಳುವಳಿಯಾಗಿ ಬಂದ ಮೇಕೆ ಗಂಡ ಮಾರಿದ್ದು ಅವಳ ಮತಿಗೆಡಿಸಿತು. ಮೇಕೆ ಮಾರಿ ಸಂತೆಯಿಂದ ಮಕ್ಕಳ ಕೈಗಿಷ್ಟು ತಿನ್ನಲು ತರದೋದ ಗಂಡನ ಮೇಲೆ ಸಿಟ್ಟು ಎರಡು ಪಟ್ಟಾಯಿತು. ಎಲ್ಲ ಒಟ್ಟಾಗಿ ಸೇರಿ ಪಿಳ್ಳಮ್ಮನ ತಲೆ ಮೊಸರು ಗಡಿಗೆಯಂತಾಗಿ ಭ್ರಾಂತಿಗೊಂಡಳು. ನಾಟಕದಲ್ಲಿ ಅಭಿಮನ್ಯು ಪಾತ್ರ ಬರುವುದು ಮಧ್ಯರಾತ್ರಿಯಾದರೂ ಪಿಳ್ಳಮ್ಮನ ತಲೆ ತುಂಬಿದ್ದ ಆತಂಕ ಕಣ್ಮುಚ್ಚಿ ಬಂದ ನಿದ್ದೆ ಹಿಂದಕ್ಕೆ ತಳ್ಳಿ, ಗಂಡನ ವೈವಾಟ ನೋಡಲೇಬೇಕೆಂದು ಕಾದಿದ್ದಳು.

'ಬಿಡ್ವೈ ಚಿಂತೆಯನು, ಬಿಡ್ವೈ ಚಿಂತೆಯನು, ತಡವ ಮಾಡದೆನಗೆ... ಕೊಡು ನೀ ಅಭಯ...' ಎಂದು ಅಭಿಮನ್ಯು ಪಾತ್ರ ರಂಗದ ಮೇಲೆ ಬಂದೇ ಬಿಟ್ಟಿತು. ಅಭಿಮನ್ಯು ಪಾತ್ರಧಾರಿ ರೊಡ್ಡಯ್ಯ, ದೊಡ್ಡಪ್ಪ ಧರ್ಮರಾಯನಿಂದ ಯುದ್ಧದಲ್ಲಿ ದ್ರೋಣನ ಚಕ್ರವ್ಯೂಹ ಭೇದಿಸಲು ಬಲವಂತವಾಗಿ ಅಪ್ಪಣೆ ಪಡೆದ. ಯುದ್ಧಕ್ಕೆ ತೆರಳುವ ವಿಷಯ ಹೆಂಡತಿ ಉತ್ತರೆಗೆ ತಿಳಿಸಲು ಅಂತಃಪುರ ಪ್ರವೇಶ ಮಾಡಿದ. ಪಿಳ್ಳಮ್ಮನ ಎರಡು ಕಣ್ಣು ಒಂದಾಗಿ ರಂಗಸ್ಥಳದಲ್ಲೇ ನೆಟ್ಟವು. ತನ್ನ ಕಣ್ಮುಂದೆಯೇ ನಾಟಕದ ಪಾತ್ರಧಾರಿ ಗಂಡನ ಕೈ ಹಿಡಿದು ಮೈ ಮುಟ್ಟುವಂತೆ ಪಕ್ಕ ಸರಿದಿದ್ದು ಪಿಳ್ಳಮ್ಮನ ಹೊಟ್ಟೆಗೆ ಕಿಚ್ಚಿಟ್ಟಂತಾಯಿತು. ಮನಸ್ಸು ತಡೆಯದೆ ನಾಟಕ ನೋಡುವುದ ಬಿಟ್ಟು; ಮಬ್ಬುಗತ್ತಲಲ್ಲೇ ಒಂಟಿಯಾಗಿ ಮನೆ ಸೇರಿದಳು. ಯುದ್ಧದಲ್ಲಿ ಹತನಾದ ಅಭಿಮನ್ಯು ಮೃತದೇಹದ ಮುಂದೆ ಉತ್ತರೆ ಪಾತ್ರಧಾರಿ ಹಾಡಿದ ಶೋಕಗೀತೆ, ಮೈಕಿನ ಮೂಲಕ ಗಾಳಿಯಲ್ಲಿ ತೇಲಿ ಬಂದು ರಂಗಸ್ಥಲದ ಕಡೆಯೇ ಕಿವಿಯಾಗಿದ್ದ ಪಿಳ್ಳಮ್ಮಗೆ ಕೂರ್ದಸಿಯಾಯಿತು. ಪಾತ್ರದೆಣ್ಣು ಗಂಡನ ಮೈಮೇಲೆ ಬಿದ್ದು ಒರಳಾಡುವ ದೃಶ್ಯ ಮನದಲ್ಲಿ ಮೂಡಿ ಮನೆಯಲ್ಲ ಬಾರಾಡಿದಳು. ಗಂಡ ತನ್ನ ಕೈಬಿಟ್ಟೇ ಹೋದನೆಂದು ಪಿಳ್ಳಮ್ಮ ಹತಾಶಳಾದಳು. ಬೆಳಕರಿಯುತ್ತಿದ್ದಂತೆ ರೊಚ್ಚಿಗೆದ್ದು ತಲೆ ಕೆದರಿ ಮನೆ ಮುಂದೆ ಗದ್ದುಗೆ ಹಾಕಿ ಎರಡೂ ಕೈಯಿಂದ ನೆಲ ಸಾರಿಸಿದಳು. ಅದು ನಾಟಕವೆಂದು ಊರೆಲ್ಲ ಹೇಳಿದರು. ನಾಟಕ ನೋಡಲು ಬಂದಿದ್ದ ನೆಂಟರೆಲ್ಲ ಸಮಾಧಾನ ಪಡಿಸಿದರು. ಹೆತ್ತಮ್ಮನೇ ಮಗಳ ತಲೆ ಸವರಿ ಸಂತೈಸಿದರೂ ಕಣ್ಣೀರಾದ ಪಿಳ್ಳಮ್ಮನ ಸಿಟ್ಟಿಳಿಯದಾಗಿತ್ತು.

'ನನ್ ಸಂಕ್ಟ ನಿಮ್ಗೆಂಗ್ ಅರ್ಥಾಗ್ಬೇಕು. ಅನ್ಬವ್ಸೋಳ್ ನಾನು' ಎಂದು ಸಮಾಧಾನ ಹೇಳಲು ಬಂದವರನ್ನೇ ತೆಪ್ಪಗಿರಿಸಿದಳು. ಎಡಗೈಲಿ ಕನ್ನಡಿ ಹಿಡಿದು, ಬಲಗೈಲಿ ಮುಖದ ಬಣ್ಣ ತೆಗೆಯುತ್ತಿದ್ದ ರೊಡ್ಡಪ್ಪನ ಕಡೆ ತಿರುಗಿದಳು. 'ಮೂಗ್ಗೊಂದ್ ನತ್ತಿಲ್ಲ ಅಂತ ಎಳ್ಡೊರ್ಸದಿಂದ ಇನ್ಕಿಲ್ದಂಗ್ ಕೇಳ್ದೆ. ವರ್ಷೊರ್ಕಂದ್ ಉಗಾದಿ ಹಬ್ಬಾಗ್ ಹರ್ದಿರ ಕುಬ್ಸುಕ್ ತ್ಯಾಪೆ ಹಾಕ್ ಮಾನ ಕಾಪಾಡ್ಕಂಡೆ. ಹಾಳಾಗೋಗ್ಲಿ ಹೊಟ್ಯಾಗ್ ಹುಟ್ಟಿದ್ ಹೆಣ್ಮಗ ಒಂದ್ ಮಳ್ದುದ್ದ ಲಂಗ ತಂದ್ಕೊಡಂತ ಅಂಗ್ಲಾಚ್ ಕೇಳ್ತು... ತಂದ್ಕೊಟ್ಟ?... ಇಲ್ಲ. ನಮ್ಯಾಕ್ ತಂದ್ಕೊಟ್ಟೆಯೇಳು? ನಾನೇನ್ ಕೈಗ್ ನೀರ್ಕೊಟ್ ಮಾಡುಂಬಕಿಕ್ಕೋಳ? ದುಡ್ಡಿದೆಲ್ಲ ಅದುಕ್ ಖರ್ಚಾತು, ಇದುಕ್ ಖರ್ಚಾತಂತ ನೂರೆಂಟ್ ಸುಳ್ಳೇಳ್ದೆ. ಯಾಕೇಳು... ನಾನೇನ್ ನಾಕ್ ಜನ್ರ ಮುಂದೆ ತಾಳಿ ಕಟ್ಕಂಡೋಳ; ಮೂರೂ ಬಿಟ್ ಕದ್ದೋಡ್ ಬಂದಳಲ್ವ? ನಿನ್ ಮಖನೆ ಕಿತ್ತಿಟ್ಟಂಗಿರ ಆ ಮಗ ಕಂಡೋರ್ಗ್ ಹುಟ್ಕಂಡಿದ್ದೆ ಅಲ್ವ? ಕಟ್ಕಂಡೋಳ್ಗೆ, ಹುಟ್ಸಿದ್ ಮಗಿಗೆ ಕೇಳಿದ್ ತಂದ್ಕೊಡಾಕ್ ನಿಂಗ್ ಮನ್ಸಿಲ್ ಬತ್ತದೇಳು? ಬಳ್ಕೋಳ್ ಮೈ ಮುಟ್ಟಾಕ್ ಇದ್ದೊಂದ್ ಮೇಕೆ ನಿನ್ ಬಾಯ್ಗಿಕ್ಕಂಡೆ. ನೀನ್ ರಾತ್ರೆ ಆಡ್ದ್ ಆಟನೆಲ್ಲ ಈ ಹಾಳಾದ್ ಕಣ್ಣಗ್ ಕಂಡ್ರೂ ನನ್ಹೊಟ್ಟೆ ಉರುಸ್ಕೊಂಡ್ ಸುಮ್ನಿರ್ಲ? ನಾನೂ ಮನುಸ್ತಲ್ವ' ಎಂದು ಅತ್ತು ಕರೆದು ಸಾಕಾಗಿ, ಎರಡು ಕಣ್ಣು ಸಾಲದೆ ಮೂಗಿಂದ ಬಂದ ನೀರ ಎಡಕ್ಕೂ ಬಲಕ್ಕೂ ಸಿರ ಸಿರನೆ ಸೀದಿ ಮತ್ತೆ ರಾಂಗಾಗಿ, 'ಆಹಹಾ... ಆಂ... ನಾಸ್ಕಿಲ್ದೆ ನನ್ ಆಟ್ಗಳ್ಳಾ ಅಷ್ಟ್ ಜನ್ರು ಮುಂದೆ ಮಾಟ್ದೋಳಿಗ್ ಮುತ್ಕೊಡಾಕ್ ಹೋಗದ? ಅಪ್ಪಿಂದ್ ಓಡಕೂ ಏಸ್ದನಲ್ಲ ಮಾನ್ಗೆಟ್ಟೋನು. ಎಲಲಾ... ಎಲಿಗ್ ಬಂತ್ನೋಡ್ ನನ್ ಒಗ್ತನ. ನಮ್ ಸಂಸಾರ ನೋಡಿ ಊರೆಲ್ಲ ತಿಕ